**ದಿನಾಂಕ: 10–11–2011 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಹಾಗೂ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| ಶ್ರೀಯುತರಾದ :– | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಎಸ್.ರಾಜಾರಾಂ, ಕೌನ್ಸಿಲ್ ಕಾರ್ಯದರ್ಶಿ |
| 2 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 2 | ಡಿ.ಕನಕರಾಜು, ಉಪ ನಿಯಂತ್ರಕರು(ಹಣಕಾಸು) |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಎಂ.ಕೃಷ್ಣಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) |
| 4 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 4 | ಎಂ.ಬಿ.ವೆಂಕಟೇಶಪ್ಪ,ಉಪ ಅರಣ್ಯ ಸಂರಕ್ಷಣಾಧಿಕಾರಿ(ದಕ್ಷಿಣ) |
| 5 | ಗೀತಾ ಶ್ರೀನಿವಾಸ್ ರೆಡ್ಡಿ | ಸದಸ್ಯರು | 5 | ಕೆ.ಪುರುಷೋತ್ತಮ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) |
| 6 | ಎನ್.ಶಕುಂತಲ | ಸದಸ್ಯರು | 6 | ಎಂ.ನಾಗರಾಜ್, ವಲಯ ಅರಣ್ಯಾಧಿಕಾರಿ(ಪೂರ್ವ) |
| 7 | ಅಶ್ವಥ್ ನಾರಾಯಣ.ಜಿ.ಎ. | ಸದಸ್ಯರು | 7 | ಕೆ.ಎಸ್.ನಾಗರಾಜ್,ವಲಯ ಅರಣ್ಯಾಧಿಕಾರಿ(ದಾಸರಹಳ್ಳಿ) |
| 8 | ಎಸ್.ವಿಜಯನ್ | ಸದಸ್ಯರು | 8 | ಬಿ.ಎಸ್.ಶಿವಪ್ಪ , ವಲಯ ಅರಣ್ಯಾಧಿಕಾರಿ(ರಾಜರಾಜೇಶ್ವರಿ ನಗರ) |
| 9 | ಎಸ್.ಕೇಶವಮೂರ್ತಿ | ಸದಸ್ಯರು | 9 | ಆರ್.ರಾಮಚಂದ್ರ, ವಲಯ ಅರಣ್ಯಾಧಿಕಾರಿ(ಪಶ್ಚಿಮ,ದಕ್ಷಿಣ) |
| 10 | ನಿರ್ಮಲ | ಸದಸ್ಯರು | 10 | ಕೆ.ಆರ್.ಕೇಶವಮೂರ್ತಿ, **ಸ.ಅ.ಸಂ.(ಪರಿಸರ ಕೋಶ–ಕೆರೆಗಳು)** |
| | | | 11 | ಬಿ.ಜಗನ್ನಾಥರಾವ್, **ಸ.ಅ.ಸಂ.(ಪರಿಸರ ಕೋಶ–ಕೆರೆಗಳು)** |
| | | | 12 | ಎನ್.ಪಿ.ಚಂದ್ರಶೇಖರ್, ಕಾ.ಪಾ.ಅ(ಕೆರೆಗಳು–1) |
| | | | 13 | ರವೀಂದ್ರ, ಕಾ.ಪಾ.ಅ(ಕೆರೆಗಳು–2 |
| | | | 14 | ಗಂಗಹನುಮಯ್ಯ, ಕಾ.ಪಾ.ಅ(ಕೆರೆಗಳು–3 |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ಸಸಿಗಳನ್ನು ನೆಡುವ ಕಾಮಗಾರಿಗೆ ಸಂಬಂಧಪಟ್ಟಂತೆ, ಸಮಿತಿಯ ಅನುಮೋದನೆ ಪಡೆಯದೆ ಟೆಂಡರ್ ಕರೆದು, ಜಾಬ್ ಕೋಡ್ ತೆಗೆದುಕೊಂಡು ಕಾಮಗಾರಿಯನ್ನು ನಿರ್ವಹಿಸುತ್ತಿರುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಸಂಬಂಧಪಟ್ಟ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸುವಂತೆ ಸೂಚಿಸಿದರು.

**ಶ್ರೀ.ಎಂ.ಬಿ.ವೆಂಕಟೇಶಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ(ದಕ್ಷಿಣ)**ರವರು, ಪ್ರಸ್ತಾವಿತ ಕಾಮಗಾರಿಯು ಕಳೆದ ವರ್ಷದ ಕಾಮಗಾರಿಯಾಗಿದ್ದು, ಈ ವರ್ಷ ಅದಕ್ಕೆ ಅನುಮೋದನೆಯಾಗಿ ಜಾಬ್‌ಕೋಡ್ ನೀಡಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಕೆಲವು ಸಂಸ್ಥೆಗಳು ಉಚಿತವಾಗಿ ಟ್ರೀ ಗಾರ್ಡ್‌ಗಳನ್ನು ನೀಡಲು ಮುಂದೆ ಬಂದಿರುವುದಾಗಿ ತಿಳಿದು ಬಂದಿದ್ದು, ಯಾವ ಯಾವ ಸಂಸ್ಥೆಗಳು ಎಷ್ಟೆಷ್ಟು ಟ್ರೀಗಾರ್ಡ್‌ಗಳನ್ನು ನೀಡಿದ್ದಾರೆಂಬ ಬಗ್ಗೆ ಸಮಿತಿಗೆ ಮಾಹಿತಿಯನ್ನು ನೀಡಲು ತಿಳಿಸಿದರು.

**ಶ್ರೀ.ಎಂ.ಕೃಷ್ಣಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ)**ರವರು ಮಾತನಾಡುತ್ತಾ, ಸುರಾನಾ ಕಾಲೇಜ್‌ರವರು ಉಚಿತವಾಗಿ ಮೆಟಲ್ ಟ್ರೀಗಾರ್ಡ್‌ಗಳನ್ನು ನೀಡುತ್ತಿದ್ದು, ಟ್ರೀಗಾರ್ಡ್‌ಗಳಲ್ಲಿ ಒಂದು ಕಡೆ ಬಿ.ಬಿ.ಎಂ.ಪಿ. ಎಂದು, ಇನ್ನೊಂದು ಕಡೆ ಸುರಾನಾ ಕಾಲೇಜ್ ಎಂದು ನಾಮಫಲಕವನ್ನು ಬರೆಸಿದ್ದಾರೆಂದು ತಿಳಿಸಿದರು. ಮೈಸೂರು ರಸ್ತೆಯಲ್ಲಿರುವ ಗೋಪಾಲನ್ ಮಾಲ್‌ರವರು ಸಹ ಉಚಿತ ಟ್ರೀಗಾರ್ಡ್‌ಗಳನ್ನು ನೀಡಲು ಮುಂದೆ ಬಂದಿರುವುದಾಗಿ ತಿಳಿಸಿದರು. ಟ್ರೀಗಾರ್ಡ್‌ಗಳ ಸರಬರಾಜು ನೋಡಿಕೊಂಡು ರಸ್ತೆ ಬದಿಯಲ್ಲಿ ಸಸಿಗಳನ್ನು ನೆಡುವ ಕಾರ್ಯವನ್ನು ನಡೆಸಲಾಗುತ್ತಿದೆಯೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಸುಮಾರು ವರ್ಷಗಳಿಂದ ಕೆಂಗೇರಿ ಕೆರೆಯಲ್ಲಿ ಜೊಂಡು ಮತ್ತು ಕಳೆಗಳು ಬೆಳೆದು ನಿಂತು, ಅಶುದ್ಧ ನೀರು ಶೇಖರಣೆಗೊಂಡು ಪರಿಸರ ಮಾಲಿನ್ಯ ಉಂಟಾಗಿರುವುದರಿಂದ, ಸದರಿ ಕೆರೆಯನ್ನು ಪಾಲಿಕೆಗೆ ಹಸ್ತಾಂತರಿಸಿಕೊಂಡು, ಕೆರೆಯನ್ನು ಸ್ವಚ್ಛಗೊಳಿಸಿ, ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

**ಅಧ್ಯಕ್ಷರು** ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

*1.* ***ಸಂಖ್ಯೆ: ತೋ.ಸ್ಥಾ.ಸ./20/2011-12, ದಿನಾಂಕ: 12-10-2011***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ಉತ್ತರ ವಿಭಾಗದ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ, ಮಹದೇವಪುರ ವಲಯಗಳಲ್ಲಿ 2010-11ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳಾದ 2009-10 ಮತ್ತು 2010-11ನೇ ಸಾಲಿನ ನೆಡುತೋಪು ನಿರ್ವಹಣೆ ಕಾಮಗಾರಿಗಳು, 2011-12ನೇ ಸಾಲಿನಲ್ಲಿ ಸಸ್ಯಕ್ಷೇತ್ರಗಳ ನಿರ್ವಹಣೆ ಕಾಮಗಾರಿಗಳು ಹಾಗೂ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗಳು ಋತುಮಾನಕ್ಕೆ ಅನುಗುಣವಾಗಿದ್ದು, ತುರ್ತು ಸಂದರ್ಭಾನುಸಾರ ನಿರ್ವಹಿಸಬೇಕಾಗಿರುವುದರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಕಡತಗಳನ್ನು ಅರಣ್ಯ ಘಟಕದ ಉತ್ತರ ವಿಭಾಗದಿಂದ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಕಡತಗಳಲ್ಲಿ 2009-10ನೇ ಸಾಲಿನ ನೆಡುತೋಪು ನಿರ್ವಹಣೆ ಕಾಮಗಾರಿಗೆ ಒಟ್ಟು ತಗಲುವ ಅಂದಾಜು ವೆಚ್ಚ ರೂ.80.50 ಲಕ್ಷಗಳು, 2010-11ನೇ ಸಾಲಿನ ನೆಡುತೋಪು ನಿರ್ವಹಣೆ ಕಾಮಗಾರಿಗೆ ಒಟ್ಟು ತಗಲುವ ಅಂದಾಜು ವೆಚ್ಚ ರೂ.184.61, 2011-12ನೇ ಸಾಲಿನಲ್ಲಿ ಸಸ್ಯಕ್ಷೇತ್ರಗಳಲ್ಲಿ ಸಸಿಗಳ ನಿರ್ವಹಣೆ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.74.44 ಲಕ್ಷಗಳು ಹಾಗೂ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗೆ ತಗಲುವ ವೆಚ್ಚ ರೂ.254.25 ಲಕ್ಷಗಳಾಗಲಿದ್ದು, ಸದರಿ ಕಡತಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಲುವಾಗಿ, ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:03-10-2011 ರ ಟಿಪ್ಪಣಿ.

***ನಿರ್ಣಯ : ಮಾನ್ಯ ಆಯುಕ್ತರ ದಿನಾಂಕ:03-10-2011ರ ಟಿಪ್ಪಣಿಯನ್ನು ಒಪ್ಪಿದೆ.***

*2.* ***ಸಂಖ್ಯೆ: ತೋ.ಸ್ಥಾ.ಸ./ 23/2011-12, ದಿನಾಂಕ:13-10-2011,***

*ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ಸಂ.73 ಮತ್ತು 198ರ ಉದ್ಯಾನವನಗಳ ಆಸ್ತಿ ರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗೆ ಅನುದಾನ ಅನುಮೋದನೆ ನೀಡುವ ಬಗ್ಗೆ.*

***ನಿರ್ಣಯ : ಮುಂದೂಡಲಾಗಿದೆ.***

*3.* ***ಸಂಖ್ಯೆ: ತೋ.ಸ್ಥಾ.ಸ./ 24/2011-12, ದಿನಾಂಕ:13-10-2011,***

*ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ಸಂ.38, 73, 129, 130 ಮತ್ತು 198ರ ಉದ್ಯಾನವನಗಳ ಆಸ್ತಿ ರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗೆ ಅನುದಾನ ಅನುಮೋದನೆ ನೀಡುವ ಬಗ್ಗೆ.*

***ನಿರ್ಣಯ : ಮುಂದೂಡಲಾಗಿದೆ.***

4. **ವಿಷಯ ಸಂಖ್ಯೆ:ತೋ/ಸ್ಥಾ/ಸ/25/ 11-12, ದಿನಾಂಕ: 13-10-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಅರಣ್ಯ ಘಟಕದ ದಕ್ಷಿಣ ವಿಭಾಗದ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಲಯಗಳಲ್ಲಿ, 2011-12ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳಾದ 1) ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, 2) ಹಳೆಯ ನೆಡುತೋಪುಗಳ ನಿರ್ವಹಣೆ, 3) ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳಸಿ ನಿರ್ವಹಿಸುವುದು ಮತ್ತು 4) ಮರಗಳ ವ್ಯವಸ್ಥಿತ ನಿರ್ವಹಣೆ, ಇವುಗಳಿಗೆ ಸಂಬಂಧಪಟ್ಟಂತೆ ಇ-ಪ್ರಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಟ್ಟು 2 ಕಡತಗಳಲ್ಲಿ ಮೂಲ ದಾಖಲೆಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದಕ್ಷಿಣ ವಿಭಾಗ ಇವರು ಸಲ್ಲಿಸಿರುತ್ತಾರೆ. ಮೇಲ್ಕಂಡ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಕಾಮಗಾರಿಯ ವಿವರ | ಅಂದಾಜು ವೆಚ್ಚ(ರೂ.ಲಕ್ಷಗಳಲ್ಲಿ) |
|---|---|---|
| 1 | 2011-12ನೇ ಸಾಲಿನಲ್ಲಿ ನೆಡುತೋಪುಗಳ ನಿರ್ಮಾಣ ಮತ್ತು ನಿರ್ವಹಣೆ | 110.40 |
| 2 | ಹಳೆಯ ನೆಡುತೋಪುಗಳ ನಿರ್ವಹಣೆ (2009-10 ಮತ್ತು 2010-11ನೇ ಸಾಲಿನ ನೆಡುತೋಪುಗಳ ನಿರ್ವಹಣೆ)<br>ಅ) 2009-10ನೇ ಸಾಲಿನ ನೆಡುತೋಪು ನಿರ್ವಹಣೆ<br>ಆ) 2010-11ನೇ ಸಾಲಿನ ನೆಡುತೋಪು ನಿರ್ವಹಣೆ | <br><br>76.50<br>227.50 |
| 3 | ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ನಿರ್ವಹಿಸುವುದು | 24.40 |
| 4 | ಮರಗಳ ವ್ಯವಸ್ಥಿತ ನಿರ್ವಹಣೆ | 233.86 |

ಆದ್ದರಿಂದ, ಸದರಿ ಕಡತಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಹಾಗೂ ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಇದಕ್ಕೆ ತಗಲುವ ಒಟ್ಟು ಅಂದಾಜು ವೆಚ್ಚ ರೂ.672.66 ಲಕ್ಷಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಲುವಾಗಿ ಮತ್ತು ಈ ಮೊತ್ತಕ್ಕೆ ಅಗತ್ಯವಿರುವ ಜಾಬ್‌ಕೋಡ್‌ಗಳನ್ನು ಸಹ ನೀಡಲು ಸಮಿತಿಯ ಅನುಮೋದನೆ ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:10-10-2011 ರ ಟಿಪ್ಪಣಿ.

**ನಿರ್ಣಯ :- ಮಾನ್ಯ ಆಯುಕ್ತರ ದಿನಾಂಕ:10-10-2011 ರ ಟಿಪ್ಪಣಿಯನ್ನು ಒಪ್ಪಿದೆ.**

5. **ವಿಷಯ ಸಂಖ್ಯೆ:ತೋ/ಸ್ಥಾ/ಸ/26/ 11-12, ದಿನಾಂಕ: 18-10-2011**

ಚಿನ್ನಪ್ಪನಹಳ್ಳಿ ಕೆರೆಯನ್ನು ಬಿ.ಬಿ.ಎಂ.ಪಿ. ವತಿಯಿಂದ ಒಟ್ಟು ಮೊತ್ತ ರೂ.232.86 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಸದರಿ ಕೆರೆಯನ್ನು 3 ವರ್ಷಗಳ ನಿರ್ವಹಣೆಗಾಗಿ ಮೆ॥ಸಿಮೆನ್ಸ್ ಇಂಡಿಯಾ ಲಿಮಿಟೆಡ್‌ರವರೊಂದಿಗೆ ಸೌಹಾರ್ದ ಒಡಂಬಡಿಕೆ (ಎಂ.ಓ.ಯು.) ಮಾಡಿ ಕೊಳ್ಳಲಾಗಿರುತ್ತದೆ. ಸದರಿ ಒಪ್ಪಂದದಡಿಯಲ್ಲಿ ಮೀನುಗಾರಿಕೆ ನಿಷೇಧ ಎಂಬ ಒಪ್ಪಂದವನ್ನು ಸಹ ಅಳವಡಿಸಿಕೊಳ್ಳಲಾಗಿರುತ್ತದೆ.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಜಯನಗರ, ಬೆಂಗಳೂರು ರವರು ಶ್ರೀ.ಶ್ರೀನಿವಾಸ್ ಬಿನ್ ವೇಲು ಎಂಬುವವರಿಗೆ ಚಿನ್ನಪ್ಪನಹಳ್ಳಿ ಕೆರೆಯಲ್ಲಿ ಮೀನುಗಾರಿಕೆ ಪಾಶುವಾರು ಹಕ್ಕನ್ನು ನೀಡಿರುತ್ತಾರೆ. ಇದರಿಂದ ಮೆ॥ಸಿಮೆನ್ಸ್ ಇಂಡಿಯಾ ಸಂಸ್ಥೆಯವರು ಒಡಂಬಡಿಕೆಯ ಒಪ್ಪಂದದಂತೆ ಮೀನುಗಾರಿಕೆಯನ್ನು ತಡೆಹಿಡಿಯಲು ಅಗ್ರಹಿಸುತ್ತಿರುತ್ತಾರೆ.

ಈ ಸಂಬಂಧವಾಗಿ, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ–2)ರವರಿಗೆ, ದಿನಾಂಕ: 18–04–2011 ರಂದು, ಮೀನುಗಾರಿಕೆ ಹಕ್ಕನ್ನು ರದ್ದುಪಡಿಸುವಂತೆ ಕೋರಿ ಪತ್ರ ಬರೆದರೂ ಸಹ ಮೀನು ಪಾಶುವಾರು ಹಕ್ಕನ್ನು ಮುಂದುವರೆಸಿರುತ್ತಾರೆ. ಆಹಾರಕ್ಕಾಗಿ ವಿವಿಧ ಜಾತಿಯ ಪಕ್ಷಿಗಳು ಕೆರೆಗೆ ಬರುತ್ತಿದ್ದು, ಮೀನುಗಾರಿಕೆಯಿಂದ ಅವುಗಳಿಗೆ ಅಡಚಣೆಯಾಗುತ್ತಿರುತ್ತದೆ. ಮೀನುಗಳನ್ನು ಅವಲಂಬಿಸಿರುವ ಇತರೆ ಜಲಚರ ಪ್ರಾಣಿಗಳು ಸಹ ಕೆರೆಯಲ್ಲಿದ್ದು, ಮೀನುಗಾರಿಕೆಯಿಂದ ಅವುಗಳ ಚಲನವಲನ ಮತ್ತು ವಂಶಾಭಿವೃದ್ಧಿಗೆ ಅಡಚಣೆ ಉಂಟಾಗಿ ಪರಿಸರಕ್ಕೆ ಹಾನಿಯಾಗುತ್ತಿರುತ್ತದೆ.

ಆದುದರಿಂದ ಪಾಲಿಕೆ ಅಭಿವೃದ್ಧಿಗೊಳಿಸಿರುವ ಕೆರೆಗಳಲ್ಲಿ ಮೀನುಗಾರಿಕೆಗೆ ಅನುಮತಿ ನೀಡದಂತೆ ಮೀನುಗಾರಿಕೆ ಇಲಾಖೆಗೆ ನಿರ್ದೇಶನ ನೀಡಲು ಆದೇಶಿಸುವಂತೆ ಕೋರಿ ಸರ್ಕಾರದಿಂದ ಆದೇಶ ಪಡೆಯಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:29–08–2011 ರ ಟಿಪ್ಪಣಿ.

**<u>ನಿರ್ಣಯ</u> :– ಮಾನ್ಯ ಆಯುಕ್ತರ ದಿನಾಂಕ:29–08–2011 ರ ಟಿಪ್ಪಣಿಯನ್ನು ಒಪ್ಪಿದೆ.**

6. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/27/ 11–12, ದಿನಾಂಕ: 18–10–2011</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಅರಣ್ಯ ಘಟಕದ ದಕ್ಷಿಣ ವಿಭಾಗದ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಲಯಗಳಲ್ಲಿ, 2011–12ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳಾದ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳು ಋತುಮಾನಕ್ಕನುಗುಣವಾಗಿದ್ದು, ತುರ್ತು ಸಂದರ್ಭಾನುಸಾರ ನಿರ್ವಹಿಸಬೇಕಾಗಿರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆ ಯನ್ನು ಕೈಗೊಂಡಿದ್ದು, ಸದರಿ ಕಡತಗಳನ್ನು ಅರಣ್ಯ ಘಟಕದ ದಕ್ಷಿಣ ವಿಭಾಗದಿಂದ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಕಡತಗಳಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗೆ ಅಗತ್ಯವಿರುವ 20000 ಸಂಖ್ಯೆಯ ಮೆಟಲ್ ಟ್ರೀ ಗಾರ್ಡ್‌ಗಳ ಸರಬರಾಜು ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.285.00 ಲಕ್ಷಗಳಾಗಲಿದ್ದು, ಸದರಿ ಕಡತಗಳಿಗೆ ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 03–10–2011 ರ ಟಿಪ್ಪಣಿ.

**ನಿರ್ಣಯ :- ಮಾನ್ಯ ಆಯುಕ್ತರ ದಿನಾಂಕ:03–10–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ ವಲಯಗಳಿಗೆ ವೃಕ್ಷ ಕವಚಗಳನ್ನು ಸರಬರಾಜು ಮಾಡಲು ಟೆಂಡರ್‌ನಲ್ಲಿ ಯಾರು ಭಾಗವಹಿಸದೇ ಇರುವ ಕ್ಷೇತ್ರಗಳಿಗೆ ಡಿಸ್ಟ್ರಿಕ್ ಸಪ್ಲೈ ಮತ್ತು ಮಾರ್ಕೆಟಿಂಗ್ ಲಿ., ರವರಿಂದ ವೃಕ್ಷ ಕವಚಗಳನ್ನು ಸರಬರಾಜು ಮಾಡಿಕೊಂಡು 60 ದಿವಸಗಳ ಅವಧಿಯೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಿತಿಯು ತೀರ್ಮಾನಿಸಿತು.**

7. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/28/ 11–12, ದಿನಾಂಕ: 18–10–2011</u>**

ದಾಸರಹಳ್ಳಿ ವಲಯದ ದಾಸರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ–1 ರ ಬಾಕಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು–5, ಪರಿಸರ ಕೋಶ, ಕೆರೆಗಳು ರವರು, ಮೊದಲನೇ ಕರೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಇಬ್ಬರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ

ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ, ಕೆರೆಗಳು ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಜೆ.ಸಿ.ಪ್ರಕಾಶ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ದಾಸರಹಳ್ಳಿ ಕೆರೆಯ ಸಮಗ್ರ ಕೆರೆಯ ಸಮಗ್ರ ಅಭಿವೃದ್ಧಿ, ಹಂತ-1 ರ ಕಾಮಗಾರಿ ಕೈಗೊಳ್ಳುವಲ್ಲಿ ವಿಫಲರಾದ ಗುತ್ತಿಗೆದಾರರಾದ ಮೆ॥ಜಾಹ್ನವಿ ಗ್ರಾನೈಟ್ಸ್ & ಬಿಲ್ಡರ್ಸ್‌ರವರ ಗುತ್ತಿಗೆ ಪರವಾನಗಿಯನ್ನು ಅಮಾನತ್ತಿನಲ್ಲಿಡಲು ಹಾಗೂ ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಮತ್ತು ಬಾಕಿ ಕಾಮಗಾರಿಗಳನ್ನು Risk & Cost ನಲ್ಲಿ ಕೈಗೊಳ್ಳಲು ದಿನಾಂಕ:28-07-2011 ರಂದು ನಡೆದ ಪಾಲಿಕೆ ಸಭೆಯ ವಿಷಯ ಸಂಖ್ಯೆ.35(108)/2011-12 ರ ನಿರ್ಣಯದಂತೆ ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿರುತ್ತದೆ ಹಾಗೂ ಸದರಿ ದಾಸರಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿಯ ಬಾಕಿ ಕಾಮಗಾರಿಗಳ ಒಟ್ಟು ರೂ.191.82 ಲಕ್ಷಗಳಿಗೆ ಮುಖ್ಯ ಅಭಿಯಂತರರು, ಪರಿಸರ ಕೋಶ, ಕೆರೆಗಳುರವರು ಕರಡು ಟೆಂಡರ್ ದಾಖಲೆಗಳಿಗೆ ಅನುಮೋದನೆ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.1,91,89,539.10ಗಳಾಗಿದ್ದು, ಮೆ॥ಜಾಹ್ನವಿ ಗ್ರಾನೈಟ್ಸ್ & ಬಿಲ್ಡರ್ಸ್‌ರವರಿಗೆ ಈಗಾಗಲೇ ಅನುಮೋದನೆಗಿದ್ದ ದರವನ್ನು ಚಾಲ್ತಿಯಲ್ಲಿರುವ 2010-11ನೇ ಸಾಲಿನ ಲೋಕೋಪಯೋಗಿ ಬೆಂಗಳೂರು ವೃತ್ತ ಹಾಗೂ ಸಣ್ಣ ನೀರಾವರಿ ಇಲಾಖೆಯ ದರಗಳಿಗೆ ಹೋಲಿಸಿದಾಗ ರೂ.2,36,45,500.41 ಗಳಾಗುತ್ತದೆ. ಸದರಿ ಚಾಲ್ತಿಯಲ್ಲಿರುವ ದರಪಟ್ಟಿಯಂತೆ, ಬಾಕಿ ಕಾಮಗಾರಿಗಳ ಒಟ್ಟು ಮೊತ್ತ ರೂ.2,36,45,500.41 ಗಳಿಗೆ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್‌ರವರು ನಮೂದಿಸಿರುವ ದರವಾದ ರೂ.2,36,20,128.26 ಗಳನ್ನು ಹೋಲಿಸಿದಾಗ ಶೇಕಡ 0.11% ರಷ್ಟು ಕಡಿಮೆ ದರಗಳಾಗುತ್ತದೆ ಹಾಗೂ ಶ್ರೀ.ಜೆ.ಸಿ.ಪ್ರಕಾಶ್ ರವರು ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು ಪರಿಸರ ಕೋಶ, ಕೆರೆಗಳು ರವರು ಶಿಫಾರಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.2,36,45,500.41 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ./335/ಎಮ್ಎನ್‌ವೈ/2007, ದಿನಾಂಕ:11-05-2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಿಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ./ 636/ ಎಮ್ಎನ್‌ವೈ/ 2007, ದಿನಾಂಕ:02-04-2011 ರ ರೀತ್ಯಾ ಕರ್ನಾಟಕ

ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ದಾಸರಹಳ್ಳಿ ಕೆರೆಯಲ್ಲಿ ನಿರ್ವಹಿಸಿರುವ ಹಂತ-1ರ ಕಾಮಗಾರಿಗಳನ್ನು ದಿನಾಂಕ:23-06-2011 ರವರೆಗೆ ನಿರ್ವಹಿಸಲಾದ ಕಾಮಗಾರಿಗಳ ಜಂಟಿ ಅಳತೆಯಂತೆ ಉಳಿಕೆ ರೂ.67,90,353.89ಗಳನ್ನು ರದ್ದು ಪಡಿಸಲಾದ ಗುತ್ತಿಗೆದಾರರಾದ ಮೆ॥ಜಾಹ್ನವಿ ಗ್ರಾನೈಟ್ಸ್ & ಬಿಲ್ಡರ್ಸ್‌ರವರಿಗೆ ಪಾವತಿಸಬೇಕಾಗಿರುತ್ತದೆ. ಬಾಕಿ ಕಾಮಗಾರಿಗಳನ್ನು ನಿರ್ವಹಿಸಲು ರೂ.2,36,20,128.26ಗಳ ಮೊತ್ತದಲ್ಲಿ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್‌ರವರಿಗೆ ವಹಿಸಿದಲ್ಲಿ ರೂ.44,30,589.00ಗಳು ಹೆಚ್ಚುವರಿಯಾಗುತ್ತದೆ. ಸದರಿ ಮೊತ್ತವನ್ನು ರದ್ದುಪಡಿಸಲಾದ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಿಲ್ಲಿನ ಮೊತ್ತದಲ್ಲಿ ಕಟಾವು ಮಾಡಿಕೊಂಡು ಭರಿಸಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರಾದ ಶ್ರೀ.ಜೆ.ಸಿ.ಪ್ರಕಾಶ್ ರವರು 2010–11 ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 0.11% ರಷ್ಟು ಕಡಿಮೆ ದರಗಳು ಅಥವಾ ರೂ.2,36,20,128.00 (ರೂಪಾಯಿ ಎರಡು ನೂರ ಮೂವತ್ತಾರು ಲಕ್ಷದ ಇಪ್ಪತ್ತು ಸಾವಿರದ ಒಂದು ನೂರ ಇಪ್ಪತ್ತೆಂಟು)ಗಳ ಟೆಂಡರ್‌ನ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:14–10–2011 ರ ಟಿಪ್ಪಣಿ.

**ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ:14–10–2011 ರ ಟಿಪ್ಪಣಿಯನ್ನು ಒಪ್ಪಿದೆ.**

*8.* ***ಸಂಖ್ಯೆ: ತೋ.ಸ್ಥಾ.ಸ./29/2011–12, ದಿನಾಂಕ:03–11–2011,***

*ವಾರ್ಡ್ ಸಂಖ್ಯೆ.145ರ ಲಕ್ಕಸಂದ್ರ ಕ್ವಾರಿ ಪಿಟ್ ಪ್ರದೇಶದಲ್ಲಿರುವ ಡೆಬ್ರಿಸ್‌ನ್ನು ಸಮತಟ್ಟು ಮಾಡಿ ಗಿಡಗಳನ್ನು ನೆಡುವ (ವೃಕ್ಷವನ ನಿರ್ಮಾಣ) ಕಾಮಗಾರಿ.*

***ನಿರ್ಣಯ : ಮುಂದೂಡಲಾಗಿದೆ.***

9. ***ಸಂಖ್ಯೆ: ತೋ.ಸ್ಥಾ.ಸ./30/2011–12, ದಿನಾಂಕ:08–11–2011,***

ವಾರ್ಡ್ ನಂ.94ರಲ್ಲಿ ನಿರ್ವಹಿಸಬೇಕಾಗಿರುವ ಎರಡು ಕಾಮಗಾರಿಗಳ ವಿವರಗಳನ್ನು ಈ ಕೆಳಗೆ ವಿವರಿಸಲಾಗಿದ್ದು, ಕೆಳಕಂಡ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯಾಗಿದ್ದು, ಸದರಿ ಕಾಮಗಾರಿಗಳು ಜರೂರು ಸ್ವರೂಪದ್ದಾಗಿರುತ್ತದೆ. ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಈ ಕಾಮಗಾರಿಗಳನ್ನು ಕೆ.ಆರ್.ಡಿ.ಎಲ್. ಸಂಸ್ಥೆ ಮುಖೇನ ಕೈಗೆತ್ತಿಕೊಂಡು ನಿರ್ವಹಿಸಲು ಪೂಜ್ಯ ಮಹಾಪೌರರು ದಿನಾಂಕ:08–08–2011ರ ಪತ್ರದಲ್ಲಿ ಆದೇಶ ನೀಡಿರುತ್ತಾರೆ. ಈ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:28–10–2011ರ ಟಿಪ್ಪಣಿ.

| ಕ್ರ.ಸಂ. | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಕಾಮಗಾರಿಯ ಮೊತ್ತ |
|---|---|---|---|
| 01 | 94 | ಶೇಷಾದ್ರಿ ಮುಖ್ಯರಸ್ತೆಯಲ್ಲಿರುವ ಸ್ವಾತಂತ್ರ್ಯ ಉದ್ಯಾನವನ ನರ್ಸರಿ ಅಭಿವೃದ್ಧಿ ಕಾಮಗಾರಿ ನಿರ್ವಹಿಸಲು. | ರೂ. 16.58 ಲಕ್ಷಗಳು |
| 02 | 94 | ಶೇಷಾದ್ರಿ ಮುಖ್ಯರಸ್ತೆಯಲ್ಲಿರುವ ಸ್ವಾತಂತ್ರ್ಯ ಉದ್ಯಾನವನದ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿಗಾಗಿ. | ರೂ. 19.65 ಲಕ್ಷಗಳು |

**ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ:28–10–2011 ರ ಟಿಪ್ಪಣಿಯನ್ನು ಒಪ್ಪಿದೆ.**

10. **ವಿಷಯ ಸಂಖ್ಯೆ:ತೋ/ಸ್ಥಾ/ಸ/31/ 11-12, ದಿನಾಂಕ: 08-11-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ದಾಸರಹಳ್ಳಿ ವಲಯದ ದಾಸರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಅಪಜೀ 348 ಇಸಿಏ 2006, ಬೆಂಗಳೂರು, ದಿನಾಂಕ:30-04-2008 ರಂತೆ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ಅಭಿವೃದ್ಧಿ ಕಾರ್ಯದ ಯೋಜನಾ ವರದಿಯನ್ನು ತಯಾರಿಸಿ ಸರ್ಕರದ ಆದೇಶದಂತೆ "ಕೆರೆ ಅಭಿವೃದ್ಧಿ ಪ್ರಾಧಿಕಾರ"ರವರಿಂದ ಉಲ್ಲೇಖ (1) ರಂತೆ ಸದರಿ ಕೆರೆಯ ಯೋಜನಾ ವರದಿಯನ್ನು ಮೊತ್ತ ರೂ.956.80 ಲಕ್ಷಗಳಿಗೆ ಅನುಮೋದನೆಯನ್ನು ಪಡೆಯಲಾಗಿರುತ್ತದೆ ಹಾಗೂ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಅಂದಾಜು ಮೊತ್ತ ರೂ.956.80 ಲಕ್ಷಗಳಿಗೆ ಉಲ್ಲೇಖ(2)ರಲ್ಲಿ ಮಾನ್ಯ ಆಡಳಿತಾಧಿಕಾರಿಯವರ ನಡವಳಿಗಳು ದಿನಾಂಕ:11-07-2008 ರಂದು ವಿಷಯ ಸಂಖ್ಯೆಏ:311/2008-09 ರಲ್ಲಿ ರೂ.956.80ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ.

ಸದರಿ ದಾಸರಹಳ್ಳಿ ಕೆರೆಯ ಗಡಿ ಭಾಗಕ್ಕೆ ತಂತಿ ಬೇಲಿ ಅಳವಡಿಸಲು ತಾಲ್ಲೂಕು ಸರ್ವೆಯರ್‌ರವರಿಂದ ಸರ್ವೆ ಕಾರ್ಯ ಕೈಗೊಂಡು ಒಟ್ಟು 6 ಎಕರೆ 12.5 ಗುಂಟೆ ಒತ್ತುವರಿ ಗುರುತಿಸಲಾಗಿದ್ದು, ಈ ಪೈಕಿ ದಿನಾಂಕ: 23-03-2011 ರಂದು ಕೆರೆಯಲ್ಲಿನ ಒಟ್ಟು 4 ಎಕರೆ ಪ್ರದೇಶದಲ್ಲಿನ ಅನಧಿಕೃತ ಕಟ್ಟಡ, ನಿವೇಶನ / ವಾಣಿಜ್ಯ ಮಳಿಗೆಗಳನ್ನು ತೆರವುಗೊಳಿಸಿ ಕೆರೆಯ ಗಡಿ ಭಾಗಕ್ಕೆ ತಂತಿ ಬೇಲಿ ಅಳವಡಿಸಲಾಗಿರುತ್ತದೆ.

ಸದರಿ ಕೆರೆಗೆ ಪೀಣ್ಯ ಕೈಗಾರಿಕಾ ಪ್ರದೇಶದಿಂದ ಕೊಳಚೆ ನೀರು ಬರುತ್ತಿದ್ದು, ಸದರಿ ನೀರನ್ನು ಸಂಸ್ಕರಿಸಿ ಸದಾ ಕೆರೆಯಲ್ಲಿ ನೀರನ್ನು ಜೀವಂತವಾಗಿಸಲು ಕೆರೆಯಲ್ಲಿ 1 MLD ಸಾಮರ್ಥ್ಯದ ನೀರು ಸಂಸ್ಕರಣಾ ಘಟಕ (Water Reclamation Plant)ನ್ನು ಸ್ಥಾಪಿಸಲು ಐದು ವರ್ಷಗಳ ನಿರ್ವಹಣೆಯೊಂದಿಗೆ DBFOT/Annuity ಮಾದರಿಯಲ್ಲಿ ಸ್ಥಾಪಿಸಲು ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ದಾಸರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1 ರ ಕಾಮಗಾರಿಗೆ ಗುತ್ತಿಗೆದಾರರನ್ನು ನಿಯೋಜಿಸಲಾಗಿ, ಕೆರೆಯಲ್ಲಿನ ಅನುಪಯುಕ್ತ ಹೂಳನ್ನು ತೆಗೆಯಲಾಗಿರುತ್ತದೆ ಹಾಗೂ ಕೆರೆಗೆ ಕೊಳಚೆ ನೀರು ಬಾರದಂತೆ ಪೈಪ್ ಲೈನ್ ಮುಖಾಂತರ ಬೇರ್ಪಡಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1 ರ ಕಾಮಗಾರಿಯನ್ನು ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ವಿಫಲರಾದ ಹಿನ್ನೆಲೆಯಲ್ಲಿ ದಿನಾಂಕ:28-07-2011 ರಂದು ನಡೆದ ಪಾಲಿಕೆ ಸಭೆಯ ವಿಷಯ ಸಂಖ್ಯೆ:35(108)/2011-12 ರಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಲು, ಗುತ್ತಿಗೆದಾರರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಗುತ್ತಿಗೆಯಲ್ಲಿನ ಬಾಕಿ ಕಾಮಗಾರಿಗಳನ್ನು Risk & Cost ನಲ್ಲಿ ಕೈಗೊಳ್ಳಲು ಹಾಗೂ ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ. ಅಂತೆಯೇ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1ರ ಬಾಕಿ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದು, 2011ನೇ ಸಾಲಿನ ಮಳೆಗಾಲದ ನಂತರ ಹಂತ-1ರ ಬಾಕಿ ಕಾಮಗಾರಿ ಕೈಗೊಳ್ಳಲು ಯೋಜಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು, ಕೆರೆ ಅಭಿವೃದ್ಧಿಯ ಎರಡನೇ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಸದರಿ ದಾಸರಹಳ್ಳಿ ಕೆರೆಯ 2ನೇ ಹಂತದ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ 2012ನೇ ಸಾಲಿನಲ್ಲಿ ಬರುವ ಮಳೆ ನೀರನ್ನು ಕೆರೆಯಲ್ಲಿ ಸಂಗ್ರಹಿಸಲು ಅನುವಾಗುತ್ತದೆ ಹಾಗೂ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿನ ಬಹುತೇಕ ಬಡಾವಣೆಗಳಲ್ಲಿನ ಅಂತರ್ಜಲ ಮಟ್ಟವನ್ನು ಸುಧಾರಿಸುವ ಹಿತದೃಷ್ಟಿಯಿಂದ

ಎರಡನೇ ಹಂತದ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿ ರೂ.300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಪಿ–2175 ಲೆಕ್ಕ ಶೀರ್ಷಿಕೆಯಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಕಾಮಗಾರಿ ಸಂಕೇತ ನೀಡಲು ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:26–10–2011 ರ ಟಿಪ್ಪಣಿ.

**ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ:26–10–2011 ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ, ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :–**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- *ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸಲಾಗಿದೆ.*
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು(ಪರಿಸರ ಕೋಶ – ಕೆರೆಗಳು)ರವರಿಗೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಪರಿಸರ ಕೋಶ–ಕೆರೆಗಳು) ರವರಿಗೆ ಕಳುಹಿಸಿದೆ.
- ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) & (ದಕ್ಷಿಣ) ರವರಿಗೆ ಕಳುಹಿಸಿದೆ.
- ವಲಯ ಅರಣ್ಯಾಧಿಕಾರಿ(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ಮಹದೇವಪುರ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ